**ಸಾಕ್ಷಿಯನ್ನು ದಿನಾಂಕಃ 23.01.2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಜೆ.ಪಿ. ವಕೀಲರವರಿಂದಃ**

1. ದಿನಾಂಕ 24.09.2016 ರಂದು ನಾನು ಪ್ರತಿವಾದಿಗೆ ಸಾಲವನ್ನು ನೀಡಿದ್ದೇನೆ. ಸಾಲ ಕೊಡುವ ಕಾಲಕ್ಕೆ ಪ್ರತಿವಾದಿ ಪ್ರೊನೋಟು ಬರೆದುಕೊಟ್ಟಿರುವರು. ಸದರಿ ಪ್ರೊನೋಟನ್ನು ಸ್ಟಾಂಪ್ ಪೇಪರಿನ ಮೇಲೆ ಬರೆದುಕೊಟ್ಟಿರುವರು. ಸದರಿ ಸ್ಟಾಂಪ್ ಪೇಪರು ಈ ಸ್ಟಾಂಪ್ ಆಗಿತ್ತು. ಸದರಿ ಸ್ಟಾಂಪ್ ಪೇಪರನ್ನು ಪ್ರತಿವಾದಿಯೇ ತಂದಿದ್ದರು. ಸದರಿ ಸ್ಟಾಂಪ್ ಪೇಪರು 100/- ರೂ. ಆಗಿತ್ತು. ಅದನ್ನು ಪ್ರತಿವಾದಿ ತಯಾರು ಮಾಡಿಕೊಂಡು ಬಂದಿದ್ದರು. ಅವರು ಎಲ್ಲಿಂದ ಮತ್ತು ಯಾರಿಂದ ಬರೆಸಿಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬಿಕ್ಕಲಂ ಸಹಿ ಕಂಡು ಬರುವುದಿಲ್ಲ ಅಂದರೆ ಸರಿ. ಸದರಿ ದಾಖಲೆಯನ್ನು ಎಲ್ಲಿ ಟೈಪು ಮಾಡಿಸಿದರು ಎಂದು ನಾನು ವಿಚಾರಿಸಿರುವುದಿಲ್ಲ.

2. ಹಣವನ್ನು ನಾನು ನಮ್ಮ ಮನೆಯಲ್ಲಿ ನೀಡಿದ್ದೇನೆ. ಆ ಸಮಯದಲ್ಲಿ ಸಾಕ್ಷಿದಾರರಾದ ನಟರಾಜ ಮತ್ತು ಹನುಮಂತಪ್ಪ ಇದ್ದರು. ದಾಖಲೆಗೆ ಸಹಿಯನ್ನು ಬರೆದುಕೊಟ್ಟವರು ಪದದ ನಂತರ ಮಾಡಬೇಕೋ ಅಥವಾ ಅದರ ಪೂರ್ವದಲ್ಲಿ ಮಾಡಬೇಕೋ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬರೆದುಕೊಟ್ಟವರು ಪದದ ಮೇಲ್ಗಡಿಗೆ ಸಹಿ ಕಂಡು ಬರುವುದು. ನಾನು

ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನಾನು ಊರಿನಲ್ಲಿ ಸಾಕಷ್ಟು ಜನರಿಗೆ ಸಾಲವನ್ನು ಕೊಡುತ್ತೇನೆ ಅಂದರೆ ಸರಿಯಲ್ಲ. ನಾನು ಸಾಲವನ್ನು ಕೊಡಲು ಮತ್ತು ಬಡ್ಡಿಯನ್ನು ಹಾಕಲು ಸರ್ಕಾರದಿಂದ ಪರವಾನಿಗೆ ಪಡೆದಿರುವುದಿಲ್ಲ.

3. ವ್ಯವಹಾರದ ಜ್ಞಾನವಿಲ್ಲದ ಮುಗ್ದರು ನನ್ನ ಬಳಿ ಬಂದರೆ ನಾನು ಅವರ ಮುಗ್ದತೆಯನ್ನು ದುರುಪಯೋಗ ಪಡಿಸಿಕೊಂಡು ನಾನೇ ಸ್ಟಾಂಪ್ ಪೇಪರನ್ನು ತೆಗೆದುಕೊಂಡು ಬಂದು ಅವರ ಸಹಿಗಳನ್ನು ದಾಖಲೆಯ ಮೇಲೆ ಪಡೆದುಕೊಳ್ಳುವ ಪರಿಪಾಠವನ್ನು ಬೆಳೆಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಯ ಸಹಿ ದಾಖಲೆಯಲ್ಲಿ ಬರೆದುಕೊಟ್ಟವರು ಎಂಬ ಪದದ ಕೆಳಗಡೆ ಇರಬೇಕಾಗಿದ್ದರೂ ಸಹಿತ ಮುಂಚಿತವಾಗಿ ಸಹಿ ಪಡೆದು ಪ್ರಿಂಟ್ ತೆಗೆದ ಕಾರಣ ಸದರಿ ಪದದ ಮೇಲ್ಗಂಡಿಗೆ ಕಂಡು ಬರುತ್ತದೆ ಅಂದರೆ ಸರಿಯಲ್ಲ.

4. ನನ್ನ ಮೋಸದ ವ್ಯವಹಾರ ಊರಿನಲ್ಲಿ ಗೊತ್ತಾಗಿರುವ ಕಾರಣ ನನಗೆ ಸಂಬಂದಿಸಿದ ದಾಖಲೆಗೆ ಯಾರೂ ಕೂಡ ಬಿಕ್ಕಲಂ ಸಹಿ ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ನಿಪಿ 1 ದಾಖಲೆಯಲ್ಲಿ ಬಿಕ್ಕಲಂ ಸಹಿ ಕಂಡು ಬರುವುದಿಲ್ಲ ಎಂದು ನನಗೆ ಗೊತ್ತಿಲ್ಲ. ನೋಟಿನ ಕಂತಿನಲ್ಲಿ ರೂ 500 ಮುಖಬೆಲೆಯ 138 ನೋಟುಗಳು ಇದ್ದವು. ರಾಗಿ ಜೋಳವನ್ನು ಮಾರಾಟ ಮಾಡಿ ಬಂದ ಹಣವನ್ನು ನಾನು ಇಟ್ಟುಕೊಂಡಿದ್ದೇನು. ನಾನು ಬೆಳೆಯನ್ನು

ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಮಾರಾಟ ಮಾಡಿದ್ದೇನೆ ಆ ಬಗ್ಗೆ ಅವರು ಬಿಲ್ಲನ್ನು ಕೊಡುವುದಿಲ್ಲ.

5. ಪ್ರತಿವಾದಿ ನನ್ನಿಂದ ರೂ 69 ಸಾವಿರ ಹಣವನ್ನು ಪಡೆದಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ ನನಗೆ ಸಂಬಂಧಿಕನಾಗಬೇಕು ಅಂದರೆ ಸರಿಯಲ್ಲ. ಪ್ರತಿವಾದಿಯು ನಾನು ನೀಡಿದ ನೋಟೀಸಿಗೆ ಕೊಟ್ಟ ಉತ್ತರದ ನೋಟೀಸು ನನಗೆ ತಲುಪಿರುತ್ತದೆ ಅಂದರೆ ಸರಿ. ಆದರೆ ಅದು ಸುಳ್ಳಾಗಿರುತ್ತದೆ. ಪ್ರತ್ಯುತ್ತರ ನೋಟೀಸಿನಲ್ಲಿ ಪ್ರತಿವಾದಿ ಹೇಳಿದ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಯು ನನ್ನಿಂದ ಕೇವಲ ರೂ 25 ಸಾವಿರ ಪಡೆದಿದ್ದು ಅದಕ್ಕೆ ತಗಲುವ ಬಡ್ಡಿಯನ್ನು ಪಾವತಿಸಲು ಬದ್ದನಿರುವನು ಎಂದು ಪ್ರತ್ಯುತ್ತರ ನೊಟೀಸಿನಲ್ಲಿ ಹೇಳಿರುವರು ಅಂದರೆ ಸರಿಯಲ್ಲ.

6. ಪ್ರಾಮಿಸರಿ ನೋಟೀನಲ್ಲಿ ನಾನು 10 ಶೇ ಬಡ್ಡಿಯನ್ನು ನಾನು ಅನುಕೂಲಕ್ಕೆ ತಕ್ಕಂತೆ ನಮೂದಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ನಾನು ಅನೇಕ ರೈತರಿಗೆ ಶೇ. 10 ಕ್ಕೆ ಸಾಲವನ್ನು ಕೊಟ್ಟು ಅವರನ್ನು ಪೀಡಿಸುತ್ತಿದ್ದೇನೆ ಎಂದು ನನ್ನ ಮೇಲೆ ಆರೋಪ ಇರುತ್ತದೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು. ಪ್ರತಿವಾದಿಯು ರೂ 25 ಸಾವಿರವನ್ನು ಬಡ್ಡಿಯೊಂದಿಗೆ ನನಗೆ 2019 ರಲ್ಲಿ ಕೊಡಲು ಬಂದಾಗ ನಾನು ನಿರಾಕರಿಸಿದ್ದೇನೆ

ಅಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿ ರೂ 25 ಸಾವಿರವನ್ನು ಕಂತುಗಳಲ್ಲಿ ಕೊಡಲು ತಯಾರಿದ್ದಾನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**23-01-2026**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 23.01.2026